ಅಧ್ಯಕ್ಷರು:– ತಾವು ತಿದ್ದುಪಡಿ ಬಗ್ಗೆ ಕಂದಾಯ ಇಲಾಖೆಯ ಮೇಲೆ ಚರ್ಚೆಗೆ ಬಂದಾಗ ಮಾತನಾಡಿ. ಈಗ ಏನು ಹೇಳಬೇಕೋ ಅದನ್ನು ಹೇಳಿ.

ಶ್ರೀ ಬಿ. ಸುರೇಶ್ ಗೌಡ:– ಮಾನ್ಯ ಅಧ್ಯಕ್ಷರೆ, ನನ್ನ ವಿನಂತಿ ಅಷ್ಟೆ.

ಅಧ್ಯಕ್ಷರು:– ಈ ರೇಟ್ ಅನ್ನು ಜಾಸ್ತಿ ಮಾಡಬೇಕೆಂದು ಕೇಳುತ್ತಿದ್ದೀರಿ.

ಶ್ರೀ ಬಿ. ಸುರೇಶ್ ಗೌಡ:– ಕೆರೆಗಳ ಪಕ್ಕದಲ್ಲಿ ಅನುಮತಿ ಕೊಡಬೇಡಿ ಎಂದು ಕೇಳುತ್ತಿದ್ದೇನೆ. ಭೂ ಪರಿವರ್ತನೆಗೆ ಕುಡಿಯುವ ನೀರಿನ ಯೋಜನೆ ಇರುವ ಕಡೆಗಳಲ್ಲಿ ಅನುಮತಿ ಕೊಡಬೇಡಿ ಎಂದು ಒಂದು ಆದೇಶ ಮಾಡಿ ಎಂದು ವಿನಂತಿ ಮಾಡುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ ಈಗ ಇರತಕ್ಕಂಥ ದರ ಏನಿದೆ, ಅದು ತುಂಬಾ ಕಡಿಮೆ ಇದೆ. ಅದನ್ನು ಮತ್ತೆ revise ಮಾಡಿ, ಒಳ್ಳೆಯ ದರವನ್ನು ಕೊಡಿ ಎಂದು ಕೇಳಿದ್ದಾರೆ. ಈ ವಿಷಯವನ್ನು ಪರಿಶೀಲನೆ ಮಾಡುತ್ತೇನೆ, ಮತ್ತೆ ಬೇರೆ ಬೇರೆ ವಿಷಯಗಳನ್ನು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಸಹ ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ.

ಅಧ್ಯಕ್ಷರು:– Ok. ಮಾನ್ಯ ಬಿ.ಬಿ. ನಿಂಗಯ್ಯನವರೆ, ಪ್ರಶ್ನೆ ಕೇಳಿ.

ಕ್ರೀಡಾಂಗಣಗಳನ್ನು ಉನ್ನತೀಕರಿಸುವುದು

223(3049); ಶ್ರೀ ನಿಂಗಯ್ಯ ಬಿ.ಬಿ (ಮೂಡಿಗೆರೆ)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಒಟ್ಟು ಕ್ರೀಡಾಂಗಣಗಳ ಸಂಖ್ಯೆ ಎಷ್ಟು;

ಆ) ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಇವುಗಳ ನಿರ್ಮಾಣಕ್ಕಾಗಿ ಈವರೆವಿಗೂ ಸರ್ಕಾರ ಮಾಡಿರುವ ವೆಚ್ಚವೆಷ್ಟು (ವಿವರ ನೀಡುವುದು)

ಈ) ಬಹಳಷ್ಟು ಕ್ರೀಡಾಂಗಣಗಳ ಕಾಮಗಾರಿ ಅಪೂರ್ಣವಾಗಿದ್ದು, ಇವುಗಳನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆ;

ಯಾವಾಗ ಕಾಮಗಾರಿಗಳನ್ನು ಮುಗಿಸಲಾಗುವುದು;

ಉ) ಮೂಡಿಗೆರೆ ಪಟ್ಟಣದಲ್ಲಿರುವ ಹೊಯ್ಸಳ ಕ್ರೀಡಾಂಗಣದ ವಿಸ್ತರಣೆ ಮತ್ತು ಉನ್ನತೀಕರಿಸಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಊ) ಹಾಗಿದ್ದಲ್ಲಿ, ಈ ಕ್ರೀಡಾಂಗಣಕ್ಕೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಹಣ ಒದಗಿಸಲಾಗಿದೆಯೇ;

ಈ ಕಾಮಗಾರಿಯನ್ನು ಸರ್ಕಾರ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು.)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ನಾಲ್ಕು ಕ್ರೀಡಾಂಗಣಗಳಿವೆ.

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 7 ತಾಲ್ಲೂಕುಗಳಿದ್ದು, ನಾಲ್ಕು ತಾಲ್ಲೂಕುಗಳಲ್ಲಿ ಮಾತ್ರ ಕ್ರೀಡಾಂಗಣವನ್ನು ನಿರ್ಮಿಸಲಾಗಿದ್ದು, ಉಳಿದ 3 ತಾಲ್ಲೂಕುಗಳಲ್ಲಿ (ತರೀಕೆರೆ, ಕೊಪ್ಪ, ಮತ್ತು ಶೃಂಗೇರಿ) ಕ್ರೀಡಾಂಗಣ ನಿರ್ಮಿಸಲು ನಿವೇಶನ ಲಭ್ಯವಿಲ್ಲದೇಯಿರುವುದರಿಂದ ನಿವೇಶನವನ್ನು ಗುರುತಿಸಲು ಕ್ರಮ ಜರುಗಿಸಲಾಗಿದೆ.

ಇ)

ಕ್ರ ಸಂ	ತಾಲ್ಲೂಕು	ಕ್ರೀಡಾಂಗಣ ಹೆಸರು	ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ (₹ ಲಕ್ಷಗಳಲ್ಲಿ)
1	ಚಿಕ್ಕಮಗಳೂರು	ಸುಭಾಷ್ ಚಂದ್ರಭೋಸ್ ಆಟದ ಮೈದಾನ	46.00
		ಶತಮಾನೋತ್ಸವ ಕ್ರೀಡಾಂಗಣ	44.15
2	ನರಸಿಂಹರಾಜಪುರ	ನರಸಿಂಹರಾಜಪುರ ತಾಲ್ಲೂಕು ಕ್ರೀಡಾಂಗಣ	44.10
3	ಮೂಡಿಗೆರೆ	ಹೊಯ್ಸಳ ಕ್ರೀಡಾಂಗಣ	36.96
4	ಕಡೂರು	ಕಡೂರು ತಾಲ್ಲೂಕು ಕ್ರೀಡಾಂಗಣ	38.28

ಈ) ಮೇಲ್ಕಂಡ ನಾಲ್ಕು ತಾಲ್ಲೂಕು ಕ್ರೀಡಾಂಗಣಗಳಲ್ಲಿ ಅಪೂರ್ಣವಾಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸುಮಾರು ₹ 200.00 ಲಕ್ಷಗಳ ಅವಶ್ಯಕತೆಯಿರುತ್ತದೆ.

ಅನುದಾನ ಲಭ್ಯತೆ ಆಧಾರದ ಮೇಲೆ ಹಂತಹಂತವಾಗಿ ಕಾಮಗಾರಿ ಕೈಗೊಳ್ಳಲಾಗುವುದು.

ಉ) ಮೂಡಿಗೆರೆ ಪಟ್ಟಣದಲ್ಲಿರುವ ಹೊಯ್ಸಳ ಕ್ರೀಡಾಂಗಣದ ವಿಸ್ತರಣೆ ಮತ್ತು ಉನ್ನತೀಕರಿಸಿ ಮೇಲ್ದರ್ಜೆಗೇರಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಊ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಯಾವುದೇ ಅನುದಾನ ಒದಗಿಸಿರುವುದಿಲ್ಲ. ಅನುದಾನ ಲಭ್ಯತೆ ಆಧಾರದ ಮೇಲೆ ಹಂತಹಂತವಾಗಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ನನ್ನ ಮೂರನೇ ಪ್ರಶ್ನೆ ಬಹಳಷ್ಟು ಕ್ರೀಡಾಂಗಣಗಳ ಕಾಮಗಾರಿ ಅಪೂರ್ಣವಾಗಿದ್ದು, ಇವುಗಳನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆ? ಎಂದು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಮೇಲ್ಕಂಡ ನಾಲ್ಕು ತಾಲ್ಲೂಕು ಕ್ರೀಡಾಂಗಣಗಳಲ್ಲಿ ಅಪೂರ್ಣವಾಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸುಮಾರು ಎರಡು ಕೋಟಿ ರೂ.ಗಳು ಬೇಕಾಗುತ್ತದೆಂದು ಉತ್ತರ ಕೊಟ್ಟಿದ್ದಾರೆ. ಯಾವ್ಯಾವ ಕ್ರೀಡಾಂಗಣಕ್ಕೆ ಎಷ್ಟೆಷ್ಟು ಹಣ ಬೇಕಾಗುತ್ತದೆಂಬ ವಿವರವನ್ನು ಕೊಟ್ಟಿಲ್ಲ. ದಯಮಾಡಿ ಈ ವಿಷಯಕ್ಕೆ ಮಾನ್ಯ ಮಂತ್ರಿಯವರು ಉತ್ತರ ಹೇಳಬೇಕು.

ಅಧ್ಯಕ್ಷರು:– ನೀವು ಕೇಳಿಲ್ಲ, ಅವರು ಉತ್ತರ ಕೊಟ್ಟಿಲ್ಲ ಅಷ್ಟೆ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಅವರು ಉತ್ತರದಲ್ಲಿ ಎರಡು ಕೋಟಿ ರೂ.ಗಳು ಬೇಕಾಗುತ್ತದೆಂದು ಹೇಳಿದ್ದಾರೆ. ನಾನು ನಾಲ್ಕು ತಾಲ್ಲೂಕು ಕ್ರೀಡಾಂಗಣಗಳಿಗೆ ಎಲ್ಲೆಲ್ಲಿ ಎಷ್ಟೆಷ್ಟು ಹಣ ಬೇಕಾಗುತ್ತದೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು:– ಮಾನ್ಯ ಮಂತ್ರಿಯವರೆ, ಉತ್ತರ ಹೇಳಿ.

ಶ್ರೀ ಕೆ. ಅಭಯಚಂದ್ರ:– ಮಾನ್ಯ ಅಧ್ಯಕ್ಷರೆ, ಜಿಲ್ಲೆಯಲ್ಲಿ ನಾಲ್ಕು ಕ್ರೀಡಾಂಗಣಗಳಿವೆ. ಅದಕ್ಕೆ ಸುಮಾರು ಎರಡು ಕೋಟಿ ರೂ.ಗಳು ಬೇಕಾಗುತ್ತದೆ. ಅದು ಎಲ್ಲೆಲ್ಲಿ ಎಷ್ಟೆಷ್ಟು ಹಣ ಬೇಕಾಗುತ್ತದೆಂಬುದನ್ನು ವಿವರ ಕೊಟ್ಟಿದ್ದೇವೆ. ಚಿಕ್ಕಮಗಳೂರು, ನರಸಿಂಹರಾಜಪುರ ವಿವರ ಕೊಟ್ಟಿದೆ ಮೂಡಿಗೆರೆಗೆ 36.96 ಲಕ್ಷ ರೂ.ಗಳು ಮತ್ತು ಕಡೂರಿಗೆ 38.28 ಲಕ್ಷ ರೂ.ಗಳುಬೇಕು ಎಂದು ವಿವರವಾಗಿ ಉತ್ತರದಲ್ಲಿ ಕೊಟ್ಟಿದ್ದೇವೆ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಅದು ಈಗಾಗಲೇ ಖರ್ಚು ಮಾಡಿರುವ ಹಣವಾಗಿದೆ. ಇದನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆಂದು ಕೇಳಿದ್ದೇವೆ.

ಅಧ್ಯಕ್ಷರು:– ಅದು ಬಿಡುಗಡೆಯಾಗಿರುವ ಅನುದಾನವಾಗಿದೆ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಅದು ಈಗಾಗಲೇ ಖರ್ಚು ಆಗಿರುವ ಹಣ. ನಾನು ಇದುವರೆಗೂ ಖರ್ಚು ಆದ ಹಣವೆಷ್ಟು? ಎಂದು ಕೇಳಿದ್ದೇನೆ. ಅದಕ್ಕೆ ಉತ್ತರ ಕೊಟಿದ್ದಾರೆ. ಈ ನಾಲ್ಕು ಕ್ರೀಡಾಂಗಣಗಳನ್ನು ಉನ್ನತೀಕರಿಸುವುದಕ್ಕೆ ಎಷ್ಟು ಹಣ ಬೇಕಾಗುತ್ತದೆಂದು ಕೇಳಿದಾಗ, ಎರಡು ಕೋಟಿ ರೂ.ಗಳು ಬೇಕಾಗುತ್ತದೆಂದು ಹೇಳಿದ್ದಾರೆ. ಅದಕ್ಕೆ ಎಲ್ಲೆಲ್ಲಿಗೆ ಎಷ್ಟೆಷ್ಟು ಹಣ ಕೊಡಬೇಕಾಗುತ್ತದೆಂದು ಅಂದಾಜು ಮಾಡಿರುವ ಬಗ್ಗೆ ಕೇಳುತ್ತಿದ್ದೇನೆ.

ಅಧ್ಯಕ್ಷರು:– ಮಾಡುತ್ತಾರೆ, ಬಿಡಿ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಮೂಡಿಗೆರೆಯಲ್ಲಿ ಹೊಯ್ಸಳ ಕ್ರೀಡಾಂಗಣ ಉನ್ನತೀಕರಿಸಿಕೊಡಬೇಕೆಂದು ಕೇಳಿದ್ದೇನೆ. ಅದಕ್ಕೆ ಹಿಂದಿನ ಸರ್ಕಾರ 73 ಲಕ್ಷ ರೂ.ಗಳನ್ನು ಆಡಳಿತಾತ್ಮಕ.....

ಅಧ್ಯಕ್ಷರು:– ತಾವು ಈಗ ಏನಾಗಬೇಕೆಂಬುದನ್ನು ಕೇಳಿ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಮೂಡಿಗೆರೆ ಕ್ರೀಡಾಂಗಣದ ಉನ್ನತೀಕರಣಕ್ಕೆ ಹಣವನ್ನು ಒದಗಿಸಿ ಕೊಡಿ ಎಂದು ಕೇಳಿದ್ದೇನೆ.

ಅಧ್ಯಕ್ಷರು:– ಆಯಿತು, ಮಾನ್ಯ ಮಂತ್ರಿಯವರೆ, ಪರಿಶೀಲನೆ ಮಾಡುತ್ತೇನೆಂದು ಹೇಳಿ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಪರಿಶೀಲನೆ ಅಲ್ಲ. ಅವರು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಕೋರ್ಟ್‌ನಲ್ಲಿ Leading question ಕೇಳುತ್ತಾರೆ ಗೊತ್ತು. ಇಲ್ಲಿ ಇದು leading answer ಆಯಿತು, ತೂಕಡಿಸುವವರಿಗೆ ಹಾಸಿಗೆ ಹಾಕಿ ಕೊಟ್ಟ ಹಾಗೆ ಆಯಿತು.

ಅಧ್ಯಕ್ಷರು:– ನಾನು ಏಕೆ ಹೇಳುತ್ತಿದ್ದೇನೆಂದರೆ, ಒಂದು ಕೆಲಸ ಮಾಡುವುದಕ್ಕೆ 10 ಲಕ್ಷ ರೂ.ಗಳನ್ನು ಕೊಟ್ಟಿರುತ್ತಾರೆ, ಆ ಕೆಲಸ ಮಾಡುತ್ತಿರುವಾಗಲೇ ಅದು 20 ಲಕ್ಷ ರೂ.ಗಳಿಗೆ ಹೋಗುತ್ತದೆ. ಅದು ಇಂತಿಷ್ಟೆ ಎಂದು civil worksನಲ್ಲಿ ನಿರೀಕ್ಷೆ ಮಾಡುವುದಕ್ಕೆ ಆಗುವುದಿಲ್ಲ. ಅದು ಸ್ವಾಭಾವಿಕ, ಮಂಜೂರಾತಿ ಆದಮೇಲೆ ಅದನ್ನು ಪೂರ್ಣ ಮಾಡುವುದಕ್ಕೆ ಎಷ್ಟು ಹಣ ಬೇಕೋ, ಅದನ್ನು ಆಯಾ ಸಂದರ್ಭದಲ್ಲಿ ಬಿಡುಗಡೆ ಮಾಡುತ್ತಾರೆ. ಈಗ ನಮ್ಮಲ್ಲೇ ಆಗಿದೆ, ಕಡಿಮೆ ಆಯಿತು, ಮತ್ತಷ್ಟು ಹಣ ಬಿಡುಗಡೆ ಮಾಡಿ ಎಂದು ಕೇಳುತ್ತೇವೆ ಅಷ್ಟೆ.

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ.

ಅಧ್ಯಕ್ಷರು:– ಅಲ್ಲಿ ಕುಳಿತು ವಿಮರ್ಶೆ ಮಾಡುವುದಕ್ಕೆ ಬರಲಿಲ್ಲವೇ? ಇಲ್ಲೇ ಪ್ರಶ್ನೆ ಕೇಳಬೇಕೆ?

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ಈ ಬಾರಿಯಾದರೂ ಹಣ ಒದಗಿಸಿಕೊಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು:– ಆಯಿತು, ಹಣ ಕೊಡಿ. ಇನ್ನು ಮಾನ್ಯ ಗುರುಪಾದಪ್ಪ ನಾಗಮಾರಪಳ್ಳಿಯವರೆ, ತಮ್ಮ ಪ್ರಶ್ನೆ ಕೇಳಿ.